**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು ಇವರು ಇವರು ನಿಯಮ-72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಸಚಿವರ ಉತ್ತರ.**

**<u>ವಿಷಯ:-</u>** ದಕ್ಷಿಣ ಕನ್ನಡ ಜಿಲ್ಲೆಯ, ಮಂಗಳೂರು ನಗರದ ವ್ಯಾಪ್ತಿಯ ಹೊಯ್ಗೆ ಬಜಾರು ವಾರ್ಡಿನ ಧೂಮಾವತಿ ದೈವಸ್ಥಾನದ ಹಿಂಬದಿಯಲ್ಲಿ ಬಂದರು ಇಲಾಖೆಗೆ ಸೇರಿದ ಪ್ರದೇಶದಲ್ಲಿ ಸುಮಾರು 100 ಕ್ಕೂ ಅಧಿಕ ವರ್ಷಗಳಿಂದ ನೆಲಬಾಡಿಗೆ ನೀಡಿ ವಾಸಿಸುತ್ತಿರುವ ಮೀನುಗಾರಿಕಾ ವೃತ್ತಿಗೆ ಸೇರಿದ ಸುಮಾರು 150 ಕ್ಕೂ ಅಧಿಕ ತೀರಾ ಬಡ ಕುಟುಂಬಗಳಿಗೆ ತನ್ನ ಮನೆಯನ್ನು ಅಭಿವೃದ್ಧಿ ಮಾಡಲು ಮತ್ತು ಕುಟುಂಬದ ಭವಿಷ್ಯದ ಬಗ್ಗೆ ಹೆಜ್ಜೆ ತೆಗೆದುಕೊಳ್ಳಲು ಅಸಾಧ್ಯವಿರುವುದರಿಂದ ಈ ಸ್ಥಳವನ್ನು ಅಕ್ರಮ ಸಕ್ರಮ ಅಡಿ ಅವರಿಗೆ ಭೂಮಿಯ ಹಕ್ಕನ್ನು ನೀಡಬೇಕೆಂದು, ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

*****

**ಉತ್ತರ:**

ಕರ್ನಾಟಕ ಕರಾವಳಿಯಲ್ಲಿ ಒಟ್ಟು 13 ಚಿಕ್ಕ ಬಂದರುಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಹಳೆ ಬಂದರು ಕೂಡ ಒಂದಾಗಿರುತ್ತದೆ.

ಮಂಗಳೂರು ಹಳೆ ಬಂದರು ಈ ಹಿಂದೆ ಮದ್ರಾಸ್ ಪ್ರಾಂತ್ಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ:01-10-1954 ರಿಂದ ಮೈಸೂರು ಸರ್ಕಾರದ ಅಧೀನದಲ್ಲಿ ಮಂಗಳೂರು ಪೋರ್ಟ್ ಟ್ರಸ್ಟ್ ಮುಖಾಂತರ ಕಾರ್ಯನಿರ್ವಹಿಸುತ್ತಿದೆ. ತದನಂತರ ದಿನಾಂಕ:01-01-1980 ರಿಂದ ಕರ್ನಾಟಕ ರಾಜ್ಯ ಸರ್ಕಾರದ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವ್ಯಾಪ್ತಿ ಅಡಿಯಲ್ಲಿ ಸದರಿ ಬಂದರು ಕಾರ್ಯಾನಿರ್ವಹಿಸುತ್ತಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ 111 ಪಿಎಸ್ ಪಿ 2017, ದಿನಾಂಕ:19-03-2018 ರಲ್ಲಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯನ್ನು ಕರ್ನಾಟಕ ಜಲಸಾರಿಗೆ ಮಂಡಳಿಯಾಗಿ ಪರಿವರ್ತಿಸಿ ಆದೇಶಿಸಿರುತ್ತದೆ.

ದಿನಾಂಕ:01-01-1980ರ ಪೂರ್ವದಲ್ಲಿ ಮಂಗಳೂರು ಹಳೆ ಬಂದರು ವ್ಯಾಪ್ತಿಯ ಹೊಯ್ಗೆ ಬಜಾರ್ ಪ್ರದೇಶದಲ್ಲಿ ಮಂಗಳೂರು ಪೋರ್ಟ್ ಟ್ರಸ್ಟ್ ಮುಖಾಂತರ ಈ ಹಿಂದೆ 23 ಜನರಿಗೆ ವಾಸಸ್ಥಾನ ಉದ್ದೇಶಕ್ಕೆ ತಾತ್ಕಾಲಿಕ ನೆಲೆಯಲ್ಲಿ ಬಂದರು ಜಾಗವನ್ನು ಹಂಚಿಕೆ ಮಾಡಲಾಗಿತ್ತು. ಆ ಬಗ್ಗೆ ಕಾಲಕಾಲಕ್ಕೆ ಕರ್ನಾಟಕ ಬಂದರುಗಳ ಸರಕುಗಳ ಹೇರಿಳಿಸುವ ನಿಯಮಗಳನ್ವಯ (Karnataka Ports (Landing & Shipping fees) Rules) ಬಂದರು ಜಾಗದ ಉಪಯೋಗದ ಬಾಡಿಗೆಯನ್ನು ಉಪಯೋಗದಾರರಿಂದ ಆಕರಿಸಲಾಗುತ್ತಿದೆ.

ಹೊಯ್ಗೆ ಬಜಾರ್ ಪ್ರದೇಶದಲ್ಲಿ ಬಹುತೇಕ ಜನರು ಮೀನುಗಾರಿಕಾ ಕಸುಬನ್ನು ಮಾಡಿಕೊಂಡಿದ್ದು, ಅವರುಗಳ ಕೋರಿಕೆಯಂತೆ ಬಲೆ ದುರಸ್ತಿ, ಬೋಟ್ ಶೆಡ್ ನಿರ್ಮಾಣ ಇನ್ನಿತರ ಮೀನುಗಾರಿಕಾ ಉದ್ದೇಶಕ್ಕೆ ತಾತ್ಕಾಲಿಕ ನೆಲೆಯಲ್ಲಿ ಈ ಹಿಂದೆ ಮಂಗಳೂರು ಪೋರ್ಟ್ ಟ್ರಸ್ಟ್ ಮುಖಾಂತರ ಮಂಜೂರಾತಿ ನೀಡಲಾಗಿರುತ್ತದೆ. ಪ್ರಸ್ತುತ 36 ಜನರಿಗೆ ತಿಂಗಳ ಬಾಡಿಗೆಯಲ್ಲಿ ವಾಸ್ತವ್ಯದ ಉದ್ದೇಶಕ್ಕೆ ಹಾಗೂ 111 ಜನರಿಗೆ ಬಲೆ ದುರಸ್ತಿ, ಬೋಟ್ ಶೆಡ್ ನಿರ್ಮಾಣ ಇನ್ನಿತರ ಮೀನುಗಾರಿಕಾ ಉದ್ದೇಶಗಳಿಗೆ ಬಂದರು ಜಾಗವನ್ನು ತಾತ್ಕಾಲಿಕವಾಗಿ ಮಂಜೂರು ಮಾಡಲಾಗಿರುತ್ತದೆ. ಸದರಿ ಅನುಭೋಗದಾರರು ಅಕ್ಟೋಬರ್ 2024 ರವರೆಗೆ ಭೂ ಬಾಡಿಗೆಯನ್ನು ಬಂದರು ಇಲಾಖೆಗೆ ಪಾವತಿಸಿರುತ್ತಾರೆ. ಹೆಚ್ಚಿನವರು ಬಂದರು ಜಾಗವನ್ನು ಮಂಜೂರು ಮಾಡಿದ ಉದ್ದೇಶಕ್ಕೆ ಬಳಸದೆ ತಾತ್ಕಾಲಿಕ ಮನೆಯನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ.

ಸರ್ಕಾರದ ಆದೇಶ ಸಂಖ್ಯೆ:ಐಡಿಡಿ 123 ಪಿಎಸ್‌ಪಿ 2020, ದಿನಾಂಕ:25.01.2021 ರಲ್ಲಿ ಕರ್ನಾಟಕ ಕಿರು ಬಂದರುಗಳ ಭೂಮಿ ಹಂಚಿಕೆ ನೀತಿಯನ್ನು ಜಾರಿಗೊಳಿಸಿದ್ದು, ಸದರಿ ನಿಯಮಗಳನ್ವಯ ಬಂದರು ಜಾಗದ ಹಕ್ಕನ್ನು ಶಾಶ್ವತವಾಗಿ ವಾಸಸ್ಥಾನದ ಉದ್ದೇಶ ಅಥವಾ ಯಾವುದೇ ಇನ್ನಿತರ ಉದ್ದೇಶಕ್ಕೆ ನೀಡಲು ಅವಕಾಶ ಇರುವುದಿಲ್ಲ.

ಕೇಂದ್ರ ಸರ್ಕಾರದ ಸಾಗರಮಾಲಾ ಯೋಜನೆಯಡಿಯಲ್ಲಿ ಹಾಗೂ ಖಾಸಗಿ ಸಹಭಾಗಿತ್ವದಡಿಯಲ್ಲಿ ಮಂಗಳೂರಿನಲ್ಲಿ ಹಲವು ಪ್ರತಿಷ್ಠಿತ ಬಂದರು ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಕರ್ನಾಟಕ ಜಲಸಾರಿಗೆ ಅಭಿವೃದ್ಧಿ ನೀತಿ 2024 ನ್ನು ಈಗಾಗಲೇ ಜಾರಿಗೊಳಿಸಿದ್ದು, ರಾಜ್ಯದ ಸಾಮಾಜಿಕ, ಆರ್ಥಿಕ, ಕೈಗಾರಿಕಾ ಅಭಿವೃದ್ಧಿಗೆ ಪೂರಕವಾಗಿ ವಾಣಿಜ್ಯಾತ್ಮಕ ಬಂದರುಗಳ ಮೂಲಸೌಕರ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಹಲವು ಯೋಜನೆಗಳನ್ನು ರೂಪಿಸಿದೆ. ಇಂತಹ ಸಂದರ್ಭದಲ್ಲಿ ಅತೀ ಅಗತ್ಯವಿರುವ ಬಂದರು ಭೂಮಿಯನ್ನು ಅಕ್ರಮ ಸಕ್ರಮದಡಿಯಲ್ಲಿ ಭೂಮಿಯ ಹಕ್ಕನ್ನು ನೀಡುವುದು ಸಮಂಜಸವಾಗಿರುವುದಿಲ್ಲ.

ಐಡಿಡಿ 19 ಪಿಎಸ್‌ಪಿ 2025

**(ಮಂಕಾಳ ಎಸ್.ವೈದ್ಯ)**
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.